# ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ. 1917/2022

ದಿನಾಂಕ:**15.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಸಿ.ಎಸ್.ಎನ್. ವಕೀಲರಿಂದ:**

ಆರೋಪಿ ಮತ್ತು ನಾನು ಸುಮಾರು 30-40 ವರ್ಷದಿಂದ ಪರಿಚಯ. ಆರೋಪಿ ನನ್ನ ಹೆಂಡತಿ ಕಡೆಯಿಂದ ದೂರದ ಸಂಬಂಧಿ. ಆರೋಪಿ ರೇಷ್ಮೇ ನೂಲು ಬಿಚ್ಚುವ ಕೆಲಸ ಮಾಡುತ್ತಾನೆ. ನಾನು ರೈತರ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು 16 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಹೆಂಡತಿ ಗೃಹಿಣಿ.

2. ಆರೋಪಿ 2015 ರಲ್ಲಿ ಫ್ಯಾಕ್ಟರಿ ಮಾಡಬೇಕು ಎಂದಿದ್ದರಿಂದ 2015 ರಿಂದ 1 ಲಕ್ಷ, 2 ಲಕ್ಷ ಈ ರೀತಿ ಕೊಡುತ್ತಾ ಬಂದಿದ್ದೇನೆ. ನಾನು ಆರೋಪಿ ಗೆ 8 ಲಕ್ಷ ರೂಪಾಯಿ ಹಣವನ್ನು ಒಂದೇ ಬಾರಿಗೆ ಹಣವನ್ನು ಕೊಟ್ಟಿರುವುದಿಲ್ಲ. ಕಂತು ಮುಖಾಂತರ ಕೊಡುತ್ತಾ ಬಂದಿದ್ದೇನೆ. ಯಾವ ಯಾವ ದಿನಾಂಕದಲ್ಲಿ ಎಷ್ಟು ಹಣ ಕೊಟ್ಟಿದ್ದೆ ಎಂದು ಈಗ ನೆನಪಿಲ್ಲ.

3. ನಾನು ಬಡ್ಡಿಗೆ ಹಣ ಕೊಡುವುದಿಲ್ಲ. ಮಹದೇವ ಮತ್ತು ವಿಜಯ್ ಕುಮಾರ್ ರವರು ಮನೆ ಕಟ್ಟುವ ಸಲುವಾಗಿ ನನ್ನ ಬಳಿ ಹಣ ತೆಗೆದುಕೊಂಡಿದ್ದರು. ಮಹದೇವ 4 ಲಕ್ಷ ರೂಪಾಯಿ, ವಿಜಯ್ 1 ಲಕ್ಷ ರೂಪಾಯಿ ತೆಗೆದುಕೊಂಡಿದ್ದರು.

4. ಆರೋಪಿ ನನಗೆ ಹಣ ಮರುಪಾವತಿ ಮಾಡುತ್ತಿರಲಿಲ್ಲ ಆಗ ಅವರ ಮೇಲೆ ನನಗೆ ವಿಶ್ವಾಸ ಹೋಗಿದ್ದರಿಂದ 2017 ರಲ್ಲಿ ಒಂದು ಕರಾರು

ಮಾಡಿಕೊಂಡಾಗ ನಿಪಿ-1 ರ ಚೆಕ್ಕನ್ನು ನನಗೆ ಆರೋಪಿ ಕೊಟ್ಟ. ನಾನು ಅದುವರೆಗೂ ಕೊಟ್ಟ ಹಣದ ಬಗ್ಗೆ ಸದರಿ ಕರಾರು ಆಗಿತ್ತು. ಸದರಿ ಕರಾರನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಬಲ್ಲೆ. 18.01.2021 ರಲ್ಲಿ ನಾನು ಆರೋಪಿಗೆ 8 ಲಕ್ಷ ರೂಪಾಯಿ ಹಣ ಕೊಟ್ಟಿಲ್ಲ. ದಿಃ 18.01.2021 ರಂದು ಆರೋಪಿ ನನಗೆ ಚೆಕ್ ಕೊಟ್ಟಿಲ್ಲ, ಸಾಕ್ಷಿ ಮುಂದುವರಿದು ಮೊದಲೇ ಕೊಟ್ಟಿದ್ದರು. ನಿಪಿ-1 ಚೆಕ್ಕು ನನಗೆ ಆರೋಪಿ ಕೊಟ್ಟಿರುವುದಿಲಲ ಎಂದರೆ ಸರಿಯಲ್ಲ ನಿಪಿ-1 ರಲ್ಲಿರುವ ಬರವಣಿಗೆ ಆರೋಪಿ ಯದಲ್ಲ ಎಂದರೆ ಸರಿ. ನಾನು ಆರೋಪಿಯ ಮನೆಗೆ, ಆರೋಪಿ ನನ್ನ ಮನೆಗೆ ಹೋಗಿ ಬರುವ ವಿಶ್ವಾಸ ಇತ್ತು. ಆ ವಿಶ್ವಾಸದಲ್ಲಿ ನಾನು ಆರೋಪಿ ಯಿಂದ ಒಂದು ಚೆಕ್ಕನ್ನು ಕಿತ್ತುಕೊಂಡು ಈ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಆರೋಪಿ ಯದ್ದಲ್ಲ ಎಂದರೆ ಸರಿಯಲ್ಲ.ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ.

5. ನನಗೆ ತಿಂಗಳಿಗೆ 40 ಸಾವಿರ ಸಂಬಳ ಬರುತ್ತೆ. ನನಗೆ ಸಂಬಳ ಬಿಟ್ಟು ಬೇರೆ ಆದಾಯ ಇಲ್ಲ. ನನ್ನ ಬಳಿ 8 ಲಕ್ಷ ರೂ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಹಣ ಕೊಡದೇ ಇದ್ದರೂ ಆರೋಪಿ ಮನೆ ಹತ್ತಿರ ಹೋಗಿ ಗಲಾಟೆ ಮಾಡಿದಾಗ ಆರೋಪಿ ಪೊಲೀಸರಿಗೆ ದೂರು ಕೊಟ್ಟಾಗ ಅವರು ನನ್ನನ್ನು ಕರೆಯಿಸಿ ಹೇಳಿಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ದೂರು ಕೊಟ್ಟಿದ್ದೆ. ಮಹದೇವ ನನಗೆ 4 ಲಕ್ಷ ರೂಪಾಯಿ, ವಿಜಯ್ ಕುಮಾರ್ 2 ಲಕ್ಷ ರೂ ಮತ್ತು ಆರೋಪಿ 8 ಲಕ್ಷ ರೂಪಾಯಿ ಕೊಡಬೇಕು ಎಂದು ದೂರು ಕೊಟ್ಟಿದ್ದೆ. ನಾನು ಕೊಟ್ಟ ದೂರಿನಲ್ಲಿ ಪೊಲೀಸರು ರಾಜಿ ಮಾಡಿ ಆರೋಪಿ ನನಗೆ ಕೊಡಬೇಕಾಗಿದ್ದ ಹಣ ಕೊಟ್ಟಿದ್ದು ಆ ಬಗ್ಗೆ ಗಲಾಟೆ ಮಾಡಬಾರದೆಂದು ನನ್ನ ಹೇಳಿಕೆ ಪಡೆದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಆರೋಪಿ ನನಗೆ

ಕೊಡಬೇಕಿದ್ದ ವೈಯಕ್ತಿಕ 6 ಲಕ್ಷ ರೂಪಾಯಿ ಬಗ್ಗೆ ಆರೋಪಿ ಒಪ್ಪಿಕೊಂಡಿದ್ದು ಹಾಗೂ ಬೇರೆಯವರಿಗೆ ಕೊಡಬೇಕಿದ್ದ 2 ಲಕ್ಷ ರೂ 2 ತಿಂಗಳಲ್ಲಿ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದ. ಆ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಮುಂದೆ ಹಾಜರುಮಾಡುತ್ತೇನೆ. ನಾನು ಹೇಳಿದ ರೀತಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ ಆದರೆ ಕೊಡಬೇಕಾಗಿರುವ ಹಣ ಆರೋಪಿ ಕೊಟ್ಟಿದ್ದು ಗಲಾಟೆ ಮಾಡಿಕೊಳ್ಳಬಾರದೆಂದು ಹೇಳಿಕೆ ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ.

6. ಆರೋಪಿ ಐಡಿಬಿಐ ಬ್ಯಾಂಕ್ ನ ಚೆಕ್ಕು ಕೊಟ್ಟಿದ್ದ. ನಾನು ಅದನ್ನು ನನ್ನ ಖಾತೆ ಇರುವ ಐಡಿಬಿಐ ಬ್ಯಾಂಕ್ ಗೆ ಹಾಜರು ಮಾಡಿದ್ದೆ. ಫಂಡ್ ಇನ್ ಸಪಿಸಿಯಂಟ್ ಎಂಬ ಹಿಂಬರಹದೊಂದಿಗೆ ನಾನು ಚೆಕ್ಕನ್ನು ನಗಧೀಕರಕ್ಕೆ ಸಲ್ಲಿಸಿದ 3-4 ದಿನದ ನಂತರ ಸದರಿ ಹಿಂಬರಹ ಕೊಟ್ಟರು. ನಾನು ಆರೋಪಿ ಗೆ ಹಣ ಕೊಟ್ಟಿರುವುದಿಲ್ಲ ಮತ್ತು ಆರೋಪಿ ನನ್ನ ಬಳಿಯಿಂದ ಹಣ ಪಡೆದುಕೊಂಡಿರುವುದಿಲ್ಲ, ಆರೋಪಿ ನನಗೆ ಚೆಕ್ಕು ಕೊಟ್ಟಿರುವುದಿಲ್ಲ ಆದರೂ ನಾನು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**